ಓ.ಎಸ್. ನಂಃ 224/2019

ಪಿ.ಡಬ್ಲ್ಯೂಃ 1

**ದಿನಾಂಕ 18.06.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ ಎಸ್.ಎಮ್.ಎಮ್. ವಕೀಲರಿಂದಃ**

9. ನನ್ನ ಮುಖ್ಯ ವಾದ ಪತ್ರದಲ್ಲಿ ಇರುವ ಚೆಕ್ಕುಬಂದಿಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ನಿಪಿ-1 ರ ಕ್ರಯಪತ್ರದಲ್ಲಿ ಪೂರ್ವಕ್ಕೆ-ದಕ್ಷಿಣಕ್ಕೆ-ಕ್ರಯಕ್ಕೆ ಕೊಟ್ಟವರ ಜಮೀನು, ಪಶ್ಚಿಮಕ್ಕೆ-ಸರ್ಕಾರಿ ಜಮೀನು ಹಾಗೂ ಉತ್ತರಕ್ಕೆ-ಹುಚ್ಚೇಗೌಡರ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರ ಪ್ರಕಾರ ನನ್ನ ತಾತನ ಹೆಸರು ಚಿಕ್ಕೇಗೌಡ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾತನ ಹೆಸರು ತಿಮ್ಮೇಗೌಡ ಅಂತ ಇರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ನ್ಯಾಯಾಲಯದ ಆದೇಶ ಪಡೆದು ನಾನು ನಿಪಿ-6 ರ ಮರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

10. ನಿಪಿ-6 ರ ಮರಣ ಪ್ರಮಣ ಪತ್ರವನ್ನು ನೀವು ಚಿಕ್ಕೇಗೌಡರ ಇತರೆ ವಾರಸುದಾರರಿಗೆ ಗೊತ್ತಿಲ್ಲದ ಹಾಗೆ ಪಡೆದಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಅನಕ್ಷರಸ್ಥನಾಗಿದ್ದು, ನಿಪಿ-6 ರಲ್ಲಿ ನನ್ನ ತಾತನ ಹೆಸರು ತಿಮ್ಮೇಗೌಡ ಎಂದು ನಮೂದು ಮಾಡುವ ಬದಲು ಚಿಕ್ಕೇಗೌಡ ಎಂದು ತಪ್ಪಗಿ ನಮೂದಾಗಿರುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಿಪಿ-6 ರ ಮರಣ ಪ್ರಮಾಣ ಪತ್ರದ ಆಧಾರದ ಮೇರೆಗೆ ದಾವಾ ಆಸ್ತಿಯ ಖಾತೆಯನ್ನು ನಮ್ಮ ಕುಟುಂಬದ ಸದಸ್ಯರ ಹೆಸರಿಗೆ ಪೌತಿ ಖಾತೆ ಮಾಡಿಸಲು ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಿಪಿ-1 ರ ದಾಖಲೆಯು ನಾನು ಮೋಸದಿಂದ ಸೃಷ್ಟಿಸಿರುವ ಕಾರಣ ಈ ದಾವೆಯಲ್ಲಿ ನನ್ನ ಕುಟುಂಬದ ಬೇರೆ ಸದಸ್ಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

11. ದಾವಾ ಆಸ್ತಿಯ 3 ದಿಕ್ಕುಗಳಲ್ಲಿ ನಮಗೆ ಕ್ರಯಕ್ಕೆ ಕೊಟ್ಟವರ ಜಮೀನುಗಳಿವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು

ಹಾಜರುಪಡಿಸಿರುವುದಿಲ್ಲ. 1977 ರಿಂದ ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1972 ರಲ್ಲಿ ದಾವಾ ಆಸ್ತಿಯನ್ನು ಖರೀದಿಸಿದಾಗಿನಿಂದಲೂ ನಾವೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇವೆ ಎಂದು ಸ್ವತಃ ನುಡಿದಿರುತ್ತಾರೆ.

12. ದಾವಾ ಆಸ್ತಿಯನ್ನೊಳಗೊಂಡಂತೆ ಇನ್ನೂ 3 ಜಮೀನನ್ನು ಪ್ರತಿವಾದಿಯ ತಂದೆ ದಿನಾಂಕಃ30.10.1977 ರಂದು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಂಸರದಲ್ಲಿ ಪ್ರತಿವಾದಿ ಮತ್ತು ಅವರ ಸಹೋದರ ದಾವಾ ಆಸ್ತಿ ಮತ್ತು ಇತರೆ ಜಮೀನುಗಳನ್ನು ವಿಭಾಗ ಮಾಡಿಕೊಂಡು 50 ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ನಾನೊಬ್ಬನೇ ಮಗನಿದ್ದು, ನನ್ನ ತಂದೆಗೆ ಬೇರೆ ಯಾವುದೇ ಮಕ್ಕಳಿಲ್ಲ.

13. ನಾನು ಪ್ರತಿವಾದಿಯರ ವಿರುದ್ಧ ಪೋಲಿಸ್ ಠಾಣೆಗೆ ದೂರನ್ನು ನೀಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ನನ್ನ ತಂದೆಯ ಹೆಸರಿನಲ್ಲಿದ್ದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಿಂದಿನಿಂದಲೂ ದಾವಾ ಆಸ್ತಿಯ ಪಹಣಿಗಳು ಪ್ರತಿವಾದಿ ಮತ್ತು ಅವರ ತಂದೆಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**